(ಶ್ರೀ ಟಿ. ಸಿ. ಬಸಪ್ಪ)

ತುಂಬ ತೊಂದರೆ ಕೊಡುತ್ತಿದ್ದಾರೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟವಾದ ನಿದರ್ಶನಗಳು ಯಾವವೂ ನನ್ನ ಗಮನಕ್ಕೆ ಬಂದಿಲ್ಲ. ಹಾಗೇನಾದರೂ ರೈತರುಗಳಿಗೆ ಇನಾಂದಾರರು ಗಳಿಂದ ತೊಂದರೆಯಾಗಿದ್ದ ಪಕ್ಷದಲ್ಲಿ ಅದಕ್ಕೆ ತಕ್ಕ ಪರಿಹಾರ ಕೊಡಿಸತಕ್ಕ ಬಗ್ಗೆ ಕಾನೂನಿನಲ್ಲಿ ಸೂಕ್ತ ಏರ್ಪಾಡುಗಳನ್ನು ಮಾಡಲಾಗಿದೆ. ಆದರೆ ಇದು ಬಹಳ ಕ್ಲಿಷ್ಟವಾದಂಥ ಸಮಸ್ಯೆ. ಆದಷ್ಟು ಜಾಗ್ರತೆ ಕಾನೂನು ರಚಿಸುವ ಪ್ರಯತ್ನದಲ್ಲಿದ್ದೇವೆ. ಇದು ತುಂಬ ದೊಡ್ಡ ಕೆಲಸ ; ಸಾಮಾನ್ಯವಾದದಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಕಾನೂನು ಪಾಸಾದ ಕೂಡಲೆ ಇದನ್ನು ಆಕ್ಟಾಗಿ ಮಾಡಬೇಕಾದದ್ದು ಆವಶ್ಯಕವೆಂಬುದು ತಮಗೆ ಗೊತ್ತಾಗಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಸೂದೆಗೆ ರಾಷ್ಟ್ರಾಧ್ಯಕ್ಷರ ಅಂಗೀಕಾರ ದೊರೆತದ್ದೇ ಮೊನ್ನೆ ಮೊನ್ನೆ ಎಂಬುದು ತಮಗೆಲ್ಲಾ ಗೊತ್ತಿದೆ. ಆದಷ್ಟು ಬೇಗ ಮಾಡಲಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಇತ್ತೀಚೆಗೆ ಪ್ರಾರಂಭವಾದ ಭೂದಾನ ವಿದ್ಯಾದಾನ ಚಳವಳಿಯಲ್ಲಿ ಕೆಲವು ಜಹಗೀರುದಾರರು ಕೆಲವು ಕೆರೆಗಳ ಅಂಗಳಗಳನ್ನೇ ದಾನವಾಗಿ ಸರ್ಕಾರಕ್ಕೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿಲ್ಲ.

Water Supply to Yeldur, Srinivasapur Taluk.

Q.—36. **Sri G. NARAYANA GOWDA** (Mulbagal-Srinivasapur).—

Will the Government be pleased to state :—

(*a*) whether an estimate was prepared for the protected water supply to Yeldur in Srinivasapur Taluk ;

(*b*) the reasons for the delay in the execution of the work ?

A.—**Sri Kadidal MANJAPPA** (Minister for Revenue and Public Works).—

(*a*) No.

(*b*) Does not arise in view of reply to (*a*).

ಶ್ರೀ ಜಿ. ನಾರಾಯಣಗೌಡ.—ಈ ಯಲ್ಡೂರಿಗೆ ನಿರ್ಮಲವಾದ ನೀರನ್ನು ಒದಗಿಸುವುದಕ್ಕೆ ಈ ಹಿಂದೆಯೇ ನಲವತ್ತು ಸಾವಿರ ರೂಪಾಯಿಗಳಿಗೆ ಒಂದು ಅಂದಾಜನ್ನು ತಯಾರಿಸಲಾಗಿರಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಬಂದಿರುವ ವರದಿಯ ಪ್ರಕಾರ ಹಾಗೆ ತಯಾರಿಸಿರಲಿಲ್ಲ ಎಂದು ತಿಳಿದು ಬಂದಿದೆ.

ಶ್ರೀ ಜಿ. ನಾರಾಯಣಗೌಡ —ಈಗಲಾದರೂ ಜಾಗ್ರತೆಯಾಗಿ ಈ ಕೆಲಸವನ್ನು ಕೈಗೊಂಡು ಅನುಕೂಲಪಡಿಸಿಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಉತ್ತರ ಕೊಡುವುದಕ್ಕೆ ಬಹಳ ಕಷ್ಟವಾದಂಥ ಪ್ರಶ್ನೆ. ಮೇಲಾಗಿ ತಾವು ಹಾಕುತ್ತಿರುವ ಪ್ರಶ್ನೆ ಊಹಾಪೋಹದಲ್ಲಿರುತ್ತದೆ.

Mr. SPEAKER.—You ask whether they will get the estimate.

ಶ್ರೀ ಜಿ. ನಾರಾಯಣಗೌಡ.—ತಾವು ಇದನ್ನು ಮತ್ತೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪುನಃ ವಿಚಾರ ಮಾಡಿನೋಡುತ್ತೇನೆ.

Settihalli Tank in Yeldur Hobli, Srinivasapur Taluk (Restoration).

Q.—37. **Sri G. NARAYANA GOWDA** (Mulbagal-Srinivasapur).—

Will the Government be pleased to state :—

(*a*) when the estimate for the restoration of Settihalli Tank in Yeldur Hobli, Srinivasapur Taluk, was prepared ;

(*b*) the steps they have taken in this behalf ?

A.—**Sri Kadidal MANJAPPA** (Minister for Revenue and Public Works).—

(*a*) In 1954.

(*b*) The estimate has been sanctioned and the work is in progress.

ಶ್ರೀ ಜಿ. ನಾರಾಯಣಗೌಡ.—ಈ ಅಂದಾಜನ್ನು ಯಾವಾಗ ತಯಾರಿಸಲಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—1954 ರಲ್ಲಿ.

ಶ್ರೀ ಜಿ. ನಾರಾಯಣಗೌಡ.—ಎಷ್ಟಕ್ಕೆ ?

ಶ್ರೀ ಕಡಿದಾಳ್ ಮಂಜಪ್ಪ.—4,500 ರೂಪಾಯಿಗಳಿಗೆ.

ಶ್ರೀ ಜಿ. ನಾರಾಯಣಗೌಡ.—ಕೆಲಸ ಪ್ರೋಗ್ರೆಸ್ಸಿನಲ್ಲಿದೆ ಎಂದು ಉತ್ತರ ಕೊಡೋಣವಾಗಿದೆ. ಈ ಬಗ್ಗೆ ತಾವೇನಾದರೂ ಟೆಂಡರ್ಸ್ ಕರೆದಿದ್ದಿರಾ, ಮತ್ತು ತಮ್ಮ ಉತ್ತರದಲ್ಲಿ ಈಗ ತಿಳಿಸಿರುವ ಪ್ರಕಾರ ಕೆಲಸ ಏನಾದರೂ ನಡೆಯುತ್ತಿದೆಯೇ ?

Sri Kadidal MANJAPPA.—I have information to the effect that they have spent up to the end of April 1955 a sum of Rs. 1,546, and that the work is in progress.

ಶ್ರೀ ಜಿ. ನಾರಾಯಣಗೌಡ.—ಇದನ್ನು ಪುನಃ ವಿಚಾರಿಸಿ ನೋಡಿ, ಹಾಗೆ ಖರ್ಚಾಗದೆ ಇದ್ದಾಗ ಈ ರೀತಿ ಉತ್ತರ ಕೊಡುವುದರ ಪರಿಣಾಮವೇನಾದೀತೆಂಬುದನ್ನು ತಿಳಿಸುತ್ತೀರಾ ?

Sri Kadidal MANJAPPA.—I did not follow the Hon'ble Member. That is the information I have got from the department. They say that the work is in progress. If the information of the

Hon'ble Member is contrary to this, he can write to me. I will investigate.

Water Supply to Holehonnur Village, Bhadravati Taluk.

Q.—43. Sri B. MADHAVACHAR (Bhadravati).—

Will the Government be pleased to state :—

whether an estimate for supply of protected water to Holehonnur village in Bhadravati Taluk, is prepared ?

A.—Sri Kadidal MANJAPPA (Minister for Revenue and Public Works).—

Yes.

ಶ್ರೀ ಬಿ. ಮಾಧವಾಚಾರ್.—ಈ ಬಾಬಿಗಾಗಿ ಒಟ್ಟು ಅಂದಾಜಾಗಿರುವ ಮೊಬಲಗೆಷ್ಟು ?

Sri Kadidal MANJAPPA.—Rs. 50,000. It is a rough estimate.

ಶ್ರೀ ಬಿ. ಮಾಧವಾಚಾರ್.—ಹೊಳೆ ಹೊನ್ನೂರಿನ ಜನಸಂಖ್ಯೆ ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನಮ್ಮ ಜಿಲ್ಲೆಯಲ್ಲೇ ಇದ್ದಾಗ್ಗೂ ಆ ವಿಚಾರ ಮರೆತು ಹೋಗಿದೆ.

ಶ್ರೀ ಬಿ. ಮಾಧವಾಚಾರ್.—ಇದನ್ನು ಕೂಡಲೇ ಮಂಜೂರು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಕೇಂದ್ರ ಸರ್ಕಾರದ ನೀರಿನ ಸರಬರಾಜು ವ್ಯವಸ್ಥೆಯಲ್ಲಿ ಸೇರಿಸಬೇಕೆಂಬ ಅಭಿಪ್ರಾಯ ನಮ್ಮ ಸರ್ಕಾರಕ್ಕಿದೆ. ಆದರೆ ಈ ಬಗ್ಗೆ ನಾನು ಯಾವುದನ್ನೂ ನಿರ್ದಿಷ್ಟವಾಗಿ ಈಗಲೆ ಹೇಳುವುದಕ್ಕಾಗುವುದಿಲ್ಲ.

Pancharatra Agama Professor (Qualification prescribed)

Q.—46. Sri B. MADHAVACHAR (Bhadravati).—

Will the Government be pleased to state :—

the qualification prescribed for the post of Pancharatra Agama Professor in the Maharaja's Sanskrit College, Mysore ?

A—Sri Kadidal MANJAPPA (Minister for Revenue and Public Works).—

Vidwat Examination in Visishtadwaitha both parts and Final Examination in Pancharatragama ; preference being given to persons possessing Naveena Nyaya qualification.

ಶ್ರೀ ಬಿ. ಮಾಧವಾಚಾರ್.—ತಾವು ಈಗ ವಿಶಿಷ್ಟಾದ್ವೈತಕ್ಕೆ ಕೊಟ್ಟಿರುವ ಹಾಗೆ ಒಂದೇಸಮನಾಗಿ ಸ್ಥಾನಗಳನ್ನು ದ್ವೈತ ಮತ್ತು ವಿಶಿಷ್ಟಾದ್ವೈತಗಳಿಗೆ ಕೊಡದೆ ಇರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಮುಜರಾಯಿ ಬಾಬಿನಲ್ಲಿ ತಿಳಿಸಿರುವಂತೆ ಶೈವಾಗಮ ವೈಖಾನ ಸಾಗಮ ಮತ್ತು ಪಂಚರಾತ್ರಾಗಮ ಇವು ಮೂರಕ್ಕೆ ಈ ವಿಶ್ವವಿದ್ಯಾನಿಲಯದಲ್ಲಿ ನಿರ್ದಿಷ್ಟವಾಗಿ ಎಷ್ಟೆಷ್ಟು ಸ್ಥಾನಗಳಿರಬೇಕು ಎಂಬುದನ್ನು ನಮೂದಿಸಲಾಗಿದೆ.

ಶ್ರೀ ಬಿ. ಮಾಧವಾಚಾರ್.—ದ್ವೈತ ಮತ್ತು ವಿಶಿಷ್ಟಾದ್ವೈತಕ್ಕೂ ಕೂಡ ಅಷ್ಟೇ ಸ್ಥಾನಗಳನ್ನು ಕೊಡಬೇಕೆಂದು ಆಗಿಂದಾಗ್ಗೆ ಮನವಿಗಳು ಬರುತ್ತಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳವಾಗಿ ಬಂದಿವೆ. ಅದಕ್ಕೊಸ್ಕರವಾಗಿಯೇ ಸರ್ಕಾರದವರು ಇದರ ಬಗ್ಗೆ ಒಂದು ಪ್ರತ್ಯೇಕವಾದ ಬೋರ್ಡನ್ನೇ ನೇಮಕ ಮಾಡಿದ್ದರು. ಅವರು ಮಾಡಿರುವ ತೀರ್ಮಾನದ ಪ್ರಕಾರ ಇವು ಮೂರಕ್ಕೆ ಮಾತ್ರ ಈಗ ಜಾರಿಯಲ್ಲಿರುವಪ್ರಕಾರ ಸ್ಥಾನವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಆದರೆ ನಾನು ಅಷ್ಟೇನೂ ವೇದಾಂತಿಯಲ್ಲ. ಆದ ಪ್ರಯುಕ್ತ ಈ ವಿಚಾರವನ್ನು ಪರಿಣತರ ತೀರ್ಮಾನಕ್ಕೆ ಬಿಡುವುದೇ ಲೇಸು.

ಶ್ರೀ ಬಿ. ಮಾಧವಾಚಾರ್.—ಆ ಬೋರ್ಡನ್ನು ತಾವು ಯಾವಾಗ ನೇಮಿಸಿದ್ದುದು ?

ಶ್ರೀ ಕಡಿದಾಳ್ ಮಂಜಪ್ಪ.—ಜೂಜ್ ತಿಂಗಳಲ್ಲಿ.

ಶ್ರೀ ಬಿ. ಮಾಧವಾಚಾರ್.—ಅದರಲ್ಲಿದ್ದ ನದನ್ಯರುಗಳು ಯಾರುಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ರೆವಿನ್ಯೂ ಕಮಿಷನರ್ ; ಮಹಾರಾಜ ಕಾಲೇಜ್ ಪ್ರಿನ್ಸಿಪಾಲರು; ಇನ್ನೂ ಯಾರುಯಾರೋ ಇದ್ದರು. ಆ ಬೋರ್ಡಿನವರು ಒಪ್ಪಿಸಿರುವ ತೀರ್ಮಾನವೇ ಇದು.

District Office Building at Shimoga

Q.—73. Sri S. R. NAGAPPA SETTY (Shimoga).—

Will the Government be pleased to state :—

(*a*) whether it is a fact that the District Office building at Shimoga is more than 100 years old and the building is unsafe as the wooden beams are eaten by white ants and are losing strength every day ;

(*b*) whether they propose to construct one new building for public offices as proposed 15 years back ?

A—Sri Kadidal MANJAPPA (Minister for Revenue and Public Works).—

(*a*) It is an old building and renewal of the demaged portion of the roof is taken up.

(*b*) There is no proposal under consideration at present.